posts even though there are reports from the Inspector of Schools to this effect. The trainees have gone on indefinite hunger strike since 27-1-86. The social workers of Bijapur have also joined the strike supporting their cause.

I urge the Government to find out where the delay is occurring and I also urge the Government to take immediate action to fill up the posts so that there should not be any unhappy incident occur since they are on hunger strike.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ರಾಜ್ಯ ಮಂತ್ರಿ).—ಇತ್ತೀಚೆಗೆ ನಡೆದ ಜಿಲ್ಲಾ ನೇಮಕಾತಿ ಸಮಿತಿಗಳ ಮೂಲಕ ಶಿಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳ ಆಯ್ಕೆ ಮಾಡಲಾಗಿದೆ. ಜೊತೆಗೆ ಗುತ್ತಿಗೆ ಆಧಾರದ ಮೇಲೆ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಪರನ್ನು ಮತ್ತು ಸ್ಥಳೀಯ ಅಭ್ಯರ್ಥಿಗಳನ್ನು ಹುದ್ದೆಗಳಲ್ಲಿ ಮುಂದುವರೆಸಲಾಗಿದೆ. ಹೊಸದಾಗಿ ಟಿ.ಸಿ.ಹೆಚ್. ಪಾಸಾದ ಅಭ್ಯರ್ಥಿಗಳನ್ನು ಶಿಕ್ಷಕರ ಹುದ್ದೆಗಳು ಮಂಜೂರಾಗದೇ ನೇಮಕ ಮಾಡಲುಸಾಧ್ಯವಿಲ್ಲ ಮತ್ತು ಮುಂದೆ ಜಿಲ್ಲಾ ನೇಮಕಾತಿ ಸಮಿತಿಗಳು ಶಿಕ್ಷಕರ ಆಯ್ಕೆಗೆ ಅರ್ಜಿ ಆಹ್ವಾನಿಸಿದಾಗ ಇವರುಗಳು ಸಮಿತಿಯ ಮುಂದೆ ಹಾಜರಾಗ ಬೇಕಾಗುತ್ತದೆ. ಜಿಲ್ಲಾ ನೇಮಕಾತಿ ಸಮಿತಿಯಿಂದ ಆಯ್ಕೆಯಾಗದೇ ಇದ್ದಲ್ಲಿ ಇವರನ್ನು ನೇಮಿಸಲು ಸಾಧ್ಯವಾಗದು

ಅಧ್ಯಕ್ಷರು.—ಬಿ.ಎಸ್. ಮುಡಿಯೂರಪ್ಪ ಮೂನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.

(ಲ) ಗಂಗಾವತಿಯಲ್ಲಿ ಸತ್ಯಾಗ್ರಹಿಗಳನ್ನು ಬಂಧಿಸಿರುವ ಬಗ್ಗೆ

ಶ್ರೀ ಜಿ.ಎಸ್. ಆಚಾರ್.—ದಿನಾಂಕ ೨೯-೧-೧೯೮೬ ರಂದು ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಸತ್ಯಾಗ್ರಹ ನಡೆಸಲಾಗಿ ಸುಮಾರು ೧೮೦-೨೦೦ ಜನ ಸತ್ಯಾಗ್ರಹಿಗಳನ್ನು ಸ್ಥಳೀಯ ಪೋಲೀಸರು ಬಂಧಿಸಿರುತ್ತಾರೆ. ಹಾಗೂ ನಂತರ ಬಿಡುಗಡೆ ಮಾಡಿರುತ್ತಾರೆ. ಬಿಡುಗಡೆಯಾದ ತರುವಾಯ ಅವರುಗಳು ತಮ್ಮ ತಮ್ಮ ಮನೆಗಳಿಗೆ ತೆರಳುತ್ತಿರುವಾಗ ಮಾರ್ಗ ಮಧ್ಯದಲ್ಲಿ ಸುಮಾರು ೧೫೦, ೨೦೦ ಜನಕಾ ಪಕ್ಷಕ್ಕೆ ಸೇರಿದವರೆಂದು ಗುರುತಿಸಲಾದ ಜನರು ಬಿಡುಗಡೆಯಾದ ಸತ್ಯಾಗ್ರಹಿಗಳ ಮೇಲೆ ಏರಿಗಿ ಅವಾಚ್ಯ ಶಬ್ದಗಳಿಂದ ಬೈದು ಹಲವರನ್ನು ಹೊಡೆದಿದ್ದಾರೆ. ಅವರುಗಳಲ್ಲಿ ಪ್ರಮುಖರಿಲೊಬ್ಬರಾದ ಶ್ರೀ ಮಹಾಬಲೇಶ್ವರ ಎಂಬುವವರನ್ನು ಹೊಡೆಯಲೆಂದು ಅಟ್ಟಿಸಿಕೊಂಡು ಹೋದಾಗ ಅವರು ಸಂಗಡಿಗರ ಸಹಾಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿದೆ. ಆದರೂ ಈ ಮೇಲ್ಕಾಣಿಸಿದ ಹಲ್ಲೆಕೋರರು ಅವರಿಗೆ ಜೀವದ ಬೆದರಿಕೆಯನ್ನು ನೀಡಿದ್ದಾರೆಂದು ತಿಳಿದುಬಂದಿದೆ. ಈಗ ಗಂಗಾವತಿಯಲ್ಲಿ ವಾತಾವರಣ ಬಹು ಗಂಭೀರವಾಗಿದು ಸೆಕ್ಷನ್ ೧೪೪ ನ್ನು ಜಾರಿಗೊಳಿಸಿದ್ದಾರೆಂದು ತಿಳಿದು ಬಂದಿದೆ ಇದು ಜರೂರು ಪ್ರಕರಣವಾಗಿ ತುರ್ತಾಗಿ ಚರ್ಚೆಗೊಳಪಡಬೇಕಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಲಾ ಆಂಡ್ ಆರ್ಡರ್ ಬಗ್ಗೆ ಬಂದಿರತಕ್ಕಂಥಾದ್ದು. ಕಾನೂನಿ ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಅಲ್ಲಿ ಸರಿಯಾದಂತಹ ಬಂದೋಬಸ್ತನ್ನು ಮಾಡಲು ಮತ್ತು ಸೂಕ್ತವಾದಂತಹ ಕ್ರಮವನ್ನು ತಪ್ಪಿತಸ್ಥರ ಮೇಲೆ ತೆಗೆದುಕೊಳ್ಳಬೇಕೆಂದು ಮೂನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡುತ್ತೇನೆ.